**All India Radio: Bangalore**
**National Bulletin In Kannada**
**08.08.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.08.2026 1.10 p.m.**

**<><><><>**

ಮುಖ್ಯಾಂಶಗಳು

1. ನಿರಂತರ ಕಲಿಕೆಯಿಂದ ಮಾತ್ರ ಯಶಸ್ಸು ಸಾಧ್ಯ; ವಿದ್ಯಾರ್ಥಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕಿವಿ ಮಾತು
2. ಭೋಪಾಲ್‌ನಲ್ಲಿ ಇಂದು ಬ್ರಿಕ್ಸ್ ಸಾಂಸ್ಕೃತಿಕ ಸಚಿವರ ಮಹತ್ವದ ಸಭೆ
3. ಗ್ರಾಹಕರಿಗೆ ಯುಪಿಐ ಸೇವೆ ಸಂಪೂರ್ಣ ಉಚಿತ: ಭಾರತೀಯ ಪಾವತಿ ಮಂಡಳಿ ಸ್ಪಷ್ಟನೆ
4. ಓಣಂ ಹಬ್ಬದ ಪ್ರಯುಕ್ತ ಕೇರಳಕ್ಕೆ ೧೧೨ ವಿಶೇಷ ರೈಲುಗಳ ಸೇವೆ ಘೋಷಣೆ
5. ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್; ಭಾರತದ ಅಶ್ಮಿತಾ ಚಲಿಹಾ ಮಹಿಳಾ ಸಿಂಗಲ್ಸ್ ಫೈನಲ್‌ಗೆ ಲಗ್ಗೆ

<><><><>

ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ನಿರಂತರ ಕಲಿಕೆಯಿಂದ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಭಾರತೀಯ ತಂತ್ರಜ್ಞಾನ ಸಂಸ್ಥೆ ಐಐಟಿ ದೆಹಲಿಯ ೫೭ನೇ ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ, ಜಗತ್ತು, ತಂತ್ರಜ್ಞಾನ, ಉದ್ಯಮ ಹಾಗೂ ವೃತ್ತಿ ಕ್ಷೇತ್ರಗಳು ಬದಲಾಗುತ್ತಿರುತ್ತದೆ. ಈ ಬದಲಾವಣೆ ನಡುವೆ ಸವಾಲುಗಳನ್ನು ಎದುರಿಸಿ ಹೊಸ ಪರಿಹಾರಗಳನ್ನು ಕಂಡುಕೊಳ್ಳುವ ಧೈರ್ಯ ತೋರುವವರಿಗೆ ನೂತನ ಅವಕಾಶಗಳು ದೊರೆಯುತ್ತವೆ ಎಂದರು. ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು, ಕೇವಲ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸುತ್ತಿಲ್ಲ, ಬದಲಿಗೆ ಜೀವನದ ಹೊಸ ಅಧ್ಯಾಯ ಪ್ರಾರಂಭಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಕ್ಯಾಂಪಸ್ ಜೀವನದ ನೆನಪುಗಳನ್ನು ಸದಾ ಸ್ಮರಿಸಲಿದ್ದು, ಈ ಕ್ಷಣವನ್ನು ಆನಂದಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು ನೂತನ ಪಯಣ ಆರಂಭಿಸುತ್ತಿರುವ ಎಲ್ಲಾ ಪದವೀಧರರಿಗೆ ಶುಭ ಹಾರೈಸಿ ಅಭಿನಂದಿಸಿದರು. ಈ ಸಮಾರಂಭದಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ೫೮೭ ಪಿಎಚ್‌ಡಿ ಸಂಶೋಧಕರು ಸೇರಿದಂತೆ ಒಟ್ಟು ಮೂರು

ಸಾವಿರಕ್ಕೂ ಹೆಚ್ಚು ಪದವೀಧರರು ಭಾಗವಹಿಸಿದ್ದರು. ಈ ವೇಳೆ ಪ್ರಧಾನಿ ಅವರು, ಸಂಸ್ಥೆಯ ಪ್ರತಿಷ್ಠಿತ 'ರಾಷ್ಟ್ರಪತಿಗಳ ಚಿನ್ನದ ಪದಕ', 'ನಿರ್ದೇಶಕರ ಚಿನ್ನದ ಪದಕ', 'ಶಂಕರ್ ದಯಾಳ್ ಶರ್ಮಾ ಚಿನ್ನದ ಪದಕ' ಹಾಗೂ 'ಪರ್ಫೆಕ್ಟ್ ಟೆನ್ ಚಿನ್ನದ ಪದಕ'ಗಳನ್ನು ಸಾಧಕ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಿದರು. ಐಐಟಿ ದೆಹಲಿಯ ಸೋನಿಪತ್ ಆವರಣದಲ್ಲಿ ಸ್ಥಾಪಿಸಲಾಗಿರುವ ಕೃತಕ ಬುದ್ಧಿಮತ್ತೆ ಆಧಾರಿತ ಉನ್ನತ ಸಾಮರ್ಥ್ಯದ ಸೂಪರ್ ಕಂಪ್ಯೂಟಿಂಗ್ ಸೌಲಭ್ಯ 'ಪರಮ್ ಪ್ರಗ್ಯಾ'ವನ್ನು ಸಹ ಪ್ರಧಾನಿ ಅವರು ವರ್ಚುವಲ್ ಮೂಲಕ ಉದ್ಘಾಟಿಸಿದರು. ಈ ಅತ್ಯಾಧುನಿಕ ಸೌಲಭ್ಯವು ಎಐ, ಡೇಟಾ ಸೈನ್ಸ್ ಹಾಗೂ ಸುಧಾರಿತ ಸಂಶೋಧನಾ ಕ್ಷೇತ್ರಗಳಲ್ಲಿ ಸಂಸ್ಥೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿದೆ.

<><><><>

ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಸಾಂಸ್ಕೃತಿಕ ಸಚಿವರ ಮಹತ್ವದ ಸಭೆ ಮಧ್ಯಪ್ರದೇಶದ ಭೋಪಾಲ್‌ನಲ್ಲಿಂದು ನಡೆಯಲಿದೆ. ಸಾಂಸ್ಕೃತಿಕ ಪರಂಪರೆ, ವಸ್ತುಸಂಗ್ರಹಾಲಯ, ಸೃಜನಶೀಲ ಆರ್ಥಿಕತೆ ಹಾಗೂ ಸಾಂಸ್ಕೃತಿಕ ವಿನಿಮಯದ ಕುರಿತು ಇಲ್ಲಿ ಚರ್ಚಿಸಲಾಗುವುದು. ಭವಿಷ್ಯದ ಬಾಂಧವ್ಯಕ್ಕೆ ಹಾದಿ ರೂಪಿಸುವ 'ಬ್ರಿಕ್ಸ್ ಸಾಂಸ್ಕೃತಿಕ ಸಚಿವರ ಘೋಷಣೆ'ಯನ್ನು ಅಂಗೀಕರಿಸುವ ಮೂಲಕ ಸಭೆ ಮುಕ್ತಾಯಗೊಳ್ಳಲಿದೆ. ಸಭೆಯ ಬಳಿಕ ಮುಖ್ಯಮಂತ್ರಿ ಡಾ. ಮೋಹನ್ ಯಾದವ್ ಅವರು ಆಯೋಜಿಸಿರುವ ಔತಣಕೂಟದಲ್ಲಿ ಭಾಗವಹಿಸಲಿರುವ ವಿದೇಶಿ ನಿಯೋಗವು, ನಂತರ ಸಾಂಚಿಗೆ ತೆರಳಿ ವಿಶ್ವ ಪ್ರಸಿದ್ಧ ಸಾಂಚಿ ಸ್ತೂಪ, ಬುದ್ಧ ಜಂಬೂದ್ವೀಪ ಮತ್ತು ಚೇತಿಯಗಿರಿ ದೇವಾಲಯಗಳನ್ನು ವೀಕ್ಷಿಸಲಿದೆ. ಸಂಜೆ ಬೌದ್ಧ ಇತಿಹಾಸ ಮತ್ತು ಕಲೆಯ ಕುರಿತ ಇಡಿ ಪ್ರೊಜೆಕ್ಷನ್ ಮ್ಯಾಪಿಂಗ್ ಹಾಗೂ ಬೆಳಕು-ಧ್ವನಿ ಪ್ರದರ್ಶನವನ್ನು ವೀಕ್ಷಿಸಲಿರುವ ಅತಿಥಿಗಳಿಗೆ ದಾಲ್-ಬಾಫ್ಲಾ ಮತ್ತು ಕೋಡೋ-ಕುಟ್ಕಿ ಸಿರಿಧಾನ್ಯಗಳ ಸಾಂಪ್ರದಾಯಿಕ ಖಾದ್ಯಗಳ ಸೌಲಭ್ಯ ಕಲ್ಪಿಸಲಾಗಿದೆ. ಇದಕ್ಕೂ ಮುನ್ನ, ಕೇಂದ್ರ ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಇಂಡೋನೇಷ್ಯಾ ಹಾಗೂ ದಕ್ಷಿಣ ಆಫ್ರಿಕಾದ ಸಾಂಸ್ಕೃತಿಕ ಸಚಿವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದು, ಇಂಡೋನೇಷ್ಯಾದ ಪ್ರಂಬನನ್ ದೇವಾಲಯ ಜೀರ್ಣೋದ್ಧಾರ ಮತ್ತು ಉಭಯ ದೇಶಗಳ ಸಾಂಸ್ಕೃತಿಕ ಸಂಬಂಧ ಬಲಪಡಿಸುವ ಕುರಿತು ಸಮಾಲೋಚಿಸಿದ್ದಾರೆ.

<><><><>

ಭಾರತೀಯ ಗ್ರಾಹಕರಿಗೆ ಯುಪಿಐ ಡಿಜಿಟಲ್ ಪಾವತಿ ಸೇವೆ ಸಂಪೂರ್ಣ ಉಚಿತವಾಗಿ ಮುಂದುವರಿಯಲಿದೆ ಎಂದು ಭಾರತೀಯ ಪಾವತಿ ಮಂಡಳಿ ಪ್ರಕಟಿಸಿದೆ. ಪ್ರತಿಯೋರ್ವ ಭಾರತೀಯನೂ ಯಾವುದೇ ವಹಿವಾಟು ಶುಲ್ಕವಿಲ್ಲದೆ ತಕ್ಷಣದ ಡಿಜಿಟಲ್ ಪಾವತಿಗಳನ್ನು ಮಾಡಬಹುದು ಮತ್ತು ಸಣ್ಣ ವ್ಯಾಪಾರಿಗಳು ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಲು ಯಾವುದೇ ಶುಲ್ಕ ನೀಡಬೇಕಾಗಿಲ್ಲ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ. ಯುಪಿಐ ವ್ಯವಸ್ಥೆಯ ಭದ್ರತೆ, ತಂತ್ರಜ್ಞಾನ ಮತ್ತು ವಂಚನೆ ತಡೆಗಟ್ಟುವಿಕೆಗೆ ಬ್ಯಾಂಕುಗಳು, ಫಿನ್-ಟೆಕ್ ಕಂಪನಿಗಳು, ಎನ್‌ಪಿಸಿಐ ಹಾಗೂ ಆರ್‌ಬಿಐ ನಿರಂತರ ಗಮನ ಹರಿಸಿವೆ ಎಂದು ಮಂಡಳಿ ತಿಳಿಸಿದೆ.

<><><>

ಓಣಂ ಹಬ್ಬದ ಪ್ರಯುಕ್ತ ಪ್ರಯಾಣಿಕರ ಸಾಂದ್ರತೆ ನಿಯಂತ್ರಿಸಲು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಭಾರತೀಯ ರೈಲ್ವೆ ಕೇರಳಂಗೆ ಒಟ್ಟು ೧೧೨ ವಿಶೇಷ ರೈಲು ಸೇವೆಗಳನ್ನು ಘೋಷಿಸಿದೆ. ಇದೇ ೧೪ ರಿಂದ ಸೆಪ್ಟೆಂಬರ್ ೬ ರವರೆಗೆ ವಿಶೇಷ ರೈಲುಗಳು ಸಂಚರಿಸಲಿವೆ. ಈ ಪೈಕಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಹಾಗೂ ದೇಶದ ಪೂರ್ವ ವಲಯಗಳಿಂದ ಮುಖ್ಯವಾಗಿ ರೈಲು ಸೇವೆಗಳನ್ನು ಕಲ್ಪಿಸಲಾಗಿದೆ. ಒಟ್ಟು ೧೧೨ ಸೇವೆಗಳಲ್ಲಿ ೩೮ ರೈಲುಗಳು ದಕ್ಷಿಣ ರೈಲ್ವೆ ವ್ಯಾಪ್ತಿಯಲ್ಲಿ ಚಲಿಸಲಿದ್ದು, ಇತರೆ ವಲಯಗಳಿಗೆ ೧೬ ಹೆಚ್ಚುವರಿ ಸೇವೆಗಳನ್ನು ದಕ್ಷಿಣ ರೈಲ್ವೆ ಪ್ರಕಟಿಸಿದೆ. ಉಳಿದಂತೆ ಇತರ ರೈಲ್ವೆ ವಲಯಗಳು ೫೮ ಓಣಂ ವಿಶೇಷ ರೈಲುಗಳನ್ನು ಒದಗಿಸಲಿವೆ.

<><><>

ಜಾರ್ಖಂಡ್ ಸಾರ್ವಜನಿಕ ಸೇವಾ ಆಯೋಗ - ಜೆಪಿಎಸ್‌ಸಿ ನಡೆಸಿರುವ ೧೪ನೇ ನಾಗರಿಕ ಸೇವೆಗಳ ಪ್ರಿಲಿಮಿನರಿ ಪರೀಕ್ಷೆಯ ಅಕ್ರಮ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ 'ಜೆಪಿಎಸ್‌ಸಿ-ಜೆಎಸ್‌ಎಸ್‌ಸಿ ಅಭ್ಯರ್ಥಿಗಳ ನ್ಯಾಯ ವೇದಿಕೆ ಪ್ರತಿನಿಧಿಗಳು ಹಾಗೂ ರಾಜ್ಯ ಸರ್ಕಾರದ ನಡುವೆ ಇಂದು ರಾಂಚಿಯಲ್ಲಿ ದ್ವಿತೀಯ ಹಂತದ ಮಾತುಕತೆ ನಡೆದಿದೆ. ೧೫ ದಿನಗಳಿಂದ ಪ್ರತಿಭಟನೆ ಮುಂದುವರಿದಿದ್ದು, ವಿದ್ಯಾರ್ಥಿ ನಾಯಕ ದೇವೇಂದ್ರ ನಾಥ್ ಮಹತೋ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಆರನೇ ದಿನಕ್ಕೆ ಕಾಲಿಟ್ಟಿದೆ. ಎಂಟು ಸದಸ್ಯರ ವಿದ್ಯಾರ್ಥಿ ನಿಯೋಗವು ಟಿಡಿಪಿಎಲ್ ಏಜೆನ್ಸಿ ನಡೆಸಿರುವ ಎಲ್ಲಾ ಪರೀಕ್ಷೆಗಳನ್ನು ರದ್ದುಗೊಳಿಸಲು ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಲು ಒತ್ತಾಯಿಸಿದೆ. ನಿನ್ನೆ ನಾಲ್ವರು ಸಚಿವರಿದ್ದ ನಿಯೋಗದೊಂದಿಗೆ ನಡೆದ ಮೊದಲ

ಸುತ್ತಿನ ಸಮಾಲೋಚನೆ ಯಾವುದೇ ನಿರ್ಣಯಗಳಾಗದೆ ಅಂತ್ಯಗೊಂಡಿತ್ತು. ಸರ್ಕಾರದ ಭರವಸೆಗಳಿಗೆ ಮಣಿಯದೆ ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಂಡು ಹಾಗೂ ಸ್ಪಷ್ಟ ನಿರ್ಧಾರ ಕೈಗೊಳ್ಳುವವರೆಗೆ ಹೋರಾಟ ಹಿಂಪಡೆಯುವುದಿಲ್ಲ ಎಂದು ಪ್ರತಿಭಟನಾನಿರತ ಅಭ್ಯರ್ಥಿಗಳು ಸ್ಪಷ್ಟಪಡಿಸಿದ್ದಾರೆ.

<><><>

ಹಿಮಾಚಲಪ್ರದೇಶದ ಚಂಬಾ ಜಿಲ್ಲೆ ತಿಸ್ಸಾ - ಬೈರಘಢ್ ಮಾರ್ಗದಲ್ಲಿ ಸಂಭವಿಸಿದ ಬಸ್ ದುರಂತದಲ್ಲಿ ಕನಿಷ್ಠ ೭ ಮಂದಿ ಮೃತಪಟ್ಟಿದ್ದು, ೧೧ ಮಂದಿ ಗಾಯಗೊಂಡಿದ್ದಾರೆ. ಸಾರಿಗೆ ಬಸ್ ನೂರು ಅಡಿ ಆಳದ ಕಂದಕಕ್ಕೆ ಉರುಳಿ ದುರ್ಘಟನೆ ಸಂಭವಿಸಿದೆ. ಘಟನೆ ಕುರಿತು ಪ್ರಧಾನಿ ನರೇಂದ್ರ ಮೋದಿ ದುಃಖ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, ಮೃತಪಟ್ಟವರ ಕುಟುಂಬಸ್ತರಿಗೆ ಸಾಂತ್ವನ ಹೇಳಿದ್ದು, ಗಾಯಗೊಂಡವರ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ.

<><><>

ಹವಾಮಾನ ವೈಪರಿತ್ಯ ಹಾಗೂ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಹಲವು ಭಾಗಗಳಲ್ಲಿ ರಸ್ತೆ ಸ್ಥಿತಿ ಸಮರ್ಪಕವಾಗಿಲ್ಲದ ಹಿನ್ನೆಲೆಯಲ್ಲಿ ಜಮ್ಮುವಿನಿಂದ ಬಲ್ತಾಲ್ ಕಡೆಗೆ ತೆರಳಬೇಕಿದ್ದ ಅಮರನಾಥ ಯಾತ್ರೆಯನ್ನು ಇಂದು ರದ್ದುಗೊಳಿಸಲಾಗಿದೆ. ಆದರೆ ಬಲ್ತಾಲ್‌ನಿಂದ ಪವಿತ್ರ ಗುಹೆಯತ್ತ ತೆರಳುವ ಯಾತ್ರೆ ವಾಡಿಕೆಯಂತೆ ಮುಂದುವರಿದಿದ್ದು, ಇಂದು ಬೆಳಿಗ್ಗೆಯಿಂದ ಒಂದು ಸಾವಿರದ ೨೦೦ಕ್ಕೂ ಹೆಚ್ಚು ಯಾತ್ರಿಕರು ದರ್ಶನ ಪಡೆದಿದ್ದಾರೆ. ಈಗಾಗಲೇ ದರ್ಶನ ಪೂರ್ಣಗೊಳಿಸಿರುವ ಯಾತ್ರಿಕರಿಗೆ ಬಲ್ತಾಲ್‌ನಿಂದ ಜಮ್ಮುವಿನತ್ತ ತೆರಳಲು ಅನುಮತಿ ನೀಡಲಾಗಿದೆ.

<><><>

ದೇಶದ ಹಲವು ಭಾಗಗಳಲ್ಲಿಂದು ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದೇಶದ ವಾಯವ್ಯ, ಈಶಾನ್ಯ, ಮಧ್ಯ, ಪೂರ್ವ, ಪಶ್ಚಿಮ ಮತ್ತು ಪರ್ಯಾಯ ದ್ವೀಪಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಗುಡುಗು, ಮಿಂಚು ಬಿರುಗಾಳಿ ಸಹಿತ ಮಳೆಯಾಗುವ ನಿರೀಕ್ಷೆ ಇದ್ದು, ತಗ್ಗು ಪ್ರದೇಶಗಳು ಹಾಗೂ ನೀರು ನಿಲ್ಲುವ ಸೂಕ್ಷ್ಮ ಪ್ರದೇಶಗಳ ಜನರು ಜಾಗರೂಕರಾಗಿರುವಂತೆ ಇಲಾಖೆ ಎಚ್ಚರಿಸಿದೆ. ದಕ್ಷಿಣ

ಭಾರತದ ಕರಾವಳಿ ಕರ್ನಾಟಕ ಹಾಗೂ ದಕ್ಷಿಣ ಒಳನಾಡಿನ ಕೆಲವು ಕಡೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶದಲ್ಲೂ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆ ಇದೆ. ಕರಾವಳಿ ತೀರದ ಪ್ರತಿಕೂಲ ಹವಾಮಾನದಿಂದಾಗಿ ಕರ್ನಾಟಕ, ಕೇರಳಂ ಮತ್ತು ಒಮಾನ್ ಕರಾವಳಿಯ ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ.

<><><><>

ದಕ್ಷಿಣ ಕೊರಿಯಾದ ಅಸಾನ್‌ನಲ್ಲಿ ನಡೆಯುತ್ತಿರುವ ಕೊರಿಯಾ ಮಾಸ್ಟರ್ಸ್ ೨೦೨೬ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಶ್ಮಿತಾ ಚಲಿಹಾ, ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದ್ದಾರೆ. ಇಂದು ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅಶ್ಮಿತಾ, ಭಾರತದವರೇ ಆದ ರಕ್ಷಿತಾ ರಾಮರಾಜ್ ವಿರುದ್ಧ ೨೧-೧೩, ೧೬-೨೧, ೨೧-೧೩ ಸೆಟ್‌ಗಳ ಅಂತರದಲ್ಲಿ ಗೆಲುವು ದಾಖಲಿಸಿ, ಅಂತಿಮ ಹಂತ ತಲುಪಿದ್ದಾರೆ.

<><><><>

ಅಮೆರಿಕದ ಯುಜೀನ್‌ನಲ್ಲಿ ನಡೆಯುತ್ತಿರುವ ೨೦ ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಮೂರನೇ ದಿನದಂದು ಭಾರತ ತನ್ನ ಪದಕದ ಖಾತೆ ತೆರೆದಿದೆ. ಪುರುಷರ ಜಾವೆಲಿನ್ ಎಸೆತ ವಿಭಾಗದಲ್ಲಿ ೧೯ ವರ್ಷದ ಆಶಿಶ್ ಯಾದವ್ ೭೪.೦೯ ಮೀಟರ್ ದೂರ ಎಸೆದು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ. ಈ ಸಾಧನೆಯೊಂದಿಗೆ, ವಿಶ್ವ ೨೦ ವರ್ಷದೊಳಗಿನ ಅಥ್ಲೆಟಿಕ್ಸ್ ಕೂಟದಲ್ಲಿ ಜಾವೆಲಿನ್ ವಿಭಾಗದಲ್ಲಿ ಪದಕ ಗೆದ್ದ ನೀರಜ್ ಚೋಪ್ರಾ ನಂತರದ ಎರಡನೇ ಭಾರತೀಯ ಎಂಬ ಹಿರಿಮೆಗೆ ಆಶಿಶ್ ಪಾತ್ರರಾಗಿದ್ದಾರೆ. ೨೦೧೬ರ ಪೋಲೆಂಡ್ ಆವೃತ್ತಿಯಲ್ಲಿ ನೀರಜ್ ಚೋಪ್ರಾ ೮೬.೪೮ ಮೀಟರ್ ಜೂನಿಯರ್ ವಿಶ್ವ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದಿದ್ದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>